ಕ್ರಮ ಸಂಖ್ಯೆ: 13



**ಕರ್ನಾಟಕ ವಿಧಾನ ಸಭೆ**
**ಹದಿನಾಲ್ಕನೇ ವಿಧಾನಸಭೆ**
**ಹದಿನಾಲ್ಕನೇ ಅಧಿವೇಶನ**

# ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-31)**

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಸ್ಟಾಂಪು (ಎರಡನೇ ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 9ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ 34) 9ನೇ ಪ್ರಕರಣದ (1)ನೇ ಉಪಪ್ರಕರಣದ (ಎ) ಖಂಡದಲ್ಲಿ ಕೊನೆಯ ಪರಂತುಕದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ :-

"ಅಲ್ಲದೇ ಪರಂತು, 21ನೇ ಜನವರಿ 2016ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ದಿನಾಂಕ:11.12.2015ರ ಸರ್ಕಾರದ ಆದೇಶ ಸಂಖ್ಯೆ ಎಜಿಡಿ 94 ಎಎಂಎಸ್ 2015ರಲ್ಲಿ ಕರ್ನಾಟಕ ಕೃಷಿ ವ್ಯವಹಾರ ಮತ್ತು ಆಹಾರ ಸಂಸ್ಕರಣೆ ಕಾರ್ಯನೀತಿ 2015ರಲ್ಲಿ ನಿರ್ದಿಷ್ಟಪಡಿಸಿದ ಅಥವಾ ರಾಜ್ಯ ಸರ್ಕಾರವು ಕಾಲಕಾಲಕ್ಕೆ ನಿರ್ದಿಷ್ಟಪಡಿಸಿದ ಯಾವುದೇ ಇತರ ಮಾರ್ಪಾಡುಗಳಂತೆ ಅರ್ಹ ಕೈಗಾರಿಕಾ ಉದ್ಯಮಗಳಿಗೆ (eligible industrial enterprises) ಸಂಬಂಧಿಸಿದಂತೆ ಬರೆದುಕೊಟ್ಟ ಅಥವಾ ಅನುಕೂಲಕರವಾಗುವ ಯಾವುದೇ ಲಿಖಿತಗಳ ಮೇಲೆ ಸಂದಾಯ ಮಾಡಬೇಕಾದ ಸ್ಟಾಂಪು ಶುಲ್ಕವನ್ನು ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ, ಅಧಿಸೂಚನೆಯ ಮೂಲಕ, 21ನೇ ಜನವರಿ 2016ರಿಂದ ಜಾರಿಗೆ ಬರುವಂತೆ ಕಾರ್ಯನೀತಿಯ ಅವಧಿಯಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಆ ಪರಿಣಾಮಕ್ಕೆ ಪ್ರಮಾಣಪತ್ರವನ್ನು ಒದಗಿಸುವುದಕ್ಕೆ ಒಳಪಟ್ಟು ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು."

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಈ ಮುಂದಿನವುಗಳಿಗೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ, ಎಂದರೆ:-

(i) ಕೃಷಿ ವ್ಯವಹಾರ ಮತ್ತು ಆಹಾರ ಸಂಸ್ಕರಣೆ ಕಾರ್ಯನೀತಿ 2015ರಲ್ಲಿ ಮಾಡಲಾದ ಪ್ರಸ್ತಾವಗಳನ್ನು ಪರಿಣಾಮಕಾರಿಯಾಗಿಸುವುದು; ಮತ್ತು

(ii) ಕೃಷಿ ವ್ಯವಹಾರ ಮತ್ತು ಆಹಾರ ಸಂಸ್ಕರಣೆ ಕೈಗಾರಿಕೋದ್ಯಮಗಳ ಬೆಳವಣಿಗೆಗೆ ಪ್ರಚೋದನೆ ನೀಡುವುದು.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕಾಗೋಡು ತಿಮ್ಮಪ್ಪ**
ಕಂದಾಯ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

**ಕರ್ನಾಟಕ ಸ್ಟಾಂಪು ಅಧಿನಿಯಮ, 1957ರ (1957ರ ಕರ್ನಾಟಕ ಅಧಿನಿಯಮ, 34) ಉದ್ಧೃತ ಭಾಗ**

**Xxx xxx xxx**

9. **ಸುಂಕಗಳನ್ನು ಕಡಿಮೆ ಮಾಡಲು, ಮಾಫಿ ಮಾಡಲು ಅಥವಾ ಅವುಗಳ ಬಗ್ಗೆ ರಾಜಿಮಾಡಿಕೊಳ್ಳಲು ಅಧಿಕಾರ.**- (1) ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ನಿಯಮ ಅಥವಾ ಆದೇಶದ ಮೂಲಕ,-

(ಎ) **Xxx xxx xxx**

ಅಲ್ಲದೇ ಪರಂತು, ನಿಯಮಿಸಲಾದ ಪ್ರಾಧಿಕಾರದಿಂದ ಆ ಪರಿಣಾಮಕ್ಕೆ ಪ್ರಮಾಣ ಪತ್ರವನ್ನು ಹಾಜರುಪಡಿಸುವುದಕ್ಕೆ ಒಳಪಟ್ಟು, ಕಾಲಕಾಲಕ್ಕೆ ರಾಜ್ಯ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ನಿರ್ದಿಷ್ಟಪಡಿಸಲಾದ ಮಾಹಿತಿ ತಂತ್ರಜ್ಞಾನ/ಮಾಹಿತಿ ತಂತ್ರಜ್ಞಾನ ಸಾಧ್ಯತಾ ಸೇವೆಗಳು/ನವೋದ್ಯಮಗಳು/ ಅನಿಮೇಷನ್/ಗೇಮಿಂಗ್(ಆಟೋಟ)/ಕಂಪ್ಯೂಟರ್ ಗ್ರಾಫಿಕ್ಸ್ (ಗಣಕ ರೇಖಾ ವಿನ್ಯಾಸ) / ದೂರ ಸಂಪರ್ಕ/ಬಿ.ಪಿ.ಓ /ಕೆ.ಪಿ.ಓ/ಇತರ ಜ್ಞಾನಾಧಾರಿತ ಕೈಗಾರಿಕೆಗಳಿಗಾಗಿ ಹೊಸ ಹೂಡಿಕೆ ಉತ್ತೇಜನ ನೀತಿಯ ಸಂಬಂಧದಲ್ಲಿ, (ನೀತಿ ಎಂದರೆ: ತಂತ್ರಜ್ಞಾನ/ಮಾಹಿತಿ ತಂತ್ರಜ್ಞಾನ ಸಾಧ್ಯತಾ ಸೇವೆಗಳು/ಅನ್ವೇಷಣಾ ಉತ್ತೇಜಕಗಳ ಕಾರ್ಯನೀತಿ), ಸಂಬಂಧಪಟ್ಟ ವ್ಯಕ್ತಿಗಳ ಮೂಲಕ ಅಥವಾ ಅವರ ನಡುವೆ ಬರೆಯಲಾದ ಯಾವುದೇ ಲಿಖಿತದ ಮೇಲೆ ಸಂದಾಯ ಮಾಡಬಹುದಾದ ಸ್ಟಾಂಪು ಸುಂಕವನ್ನು, ರಾಜ್ಯ ಸರ್ಕಾರವು, ಸಾರ್ವಜನಿಕ ಹಿತಾಸಕ್ತಿಯಲ್ಲಿ, ಅಧಿಸೂಚನೆಯ ಮೂಲಕ 16ನೇ ಜನವರಿ 2014ರಿಂದ ಜಾರಿಗೆ ಬರುವಂತೆ ಐದು ವರ್ಷಗಳಿಗಾಗಿ ಕಡಿಮೆ ಮಾಡಬಹುದು ಅಥವಾ ಮಾಫಿ ಮಾಡಬಹುದು.

**Xxx xxx xxx**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. ಪಿ7, ಕಾಸೂ , -ಪ್ರತಿಗಳು 1000, 16ನೇ ನೂನ್ 2017

Serial No: (13)

**KARNATAKA LEGISLATIVE ASSEMBLY**
**FOURTEENTH LEGISLATIVE ASSEMBLY**
**FOURTEENTH SESSION**

# THE KARNATAKA STAMP (SECOND AMENDMENT) BILL, 2017

**(L.A. Bill No. 31 of 2017)**

A Bill further to amend the Karnataka Stamp Act, 1957.

Whereas it is expedient further to amend the Karnataka Stamp Act, 1957 (Karnataka Act 34 of 1957), for the purposes hereinafter appearing;

Be it enacted by the Karnataka State Legislature in the sixty-eighth year of the Republic of India as follows:-

**1. Short title and commencement**.– (1) This Act may be called the Karnataka Stamp (Second Amendment) Act, 2017.

(2) It shall come into force at once.

**2. Amendment of Section 9**.- In section 9 of the Karnataka Stamp Act, 1957, (Karnataka Act 34 of 1957) in sub-section (1), in clause (a), after the last proviso, the following shall be inserted, namely:-

"Provided also that the State Government may in public interest, by notification, with effect from 21st January, 2016, reduce or remit during the policy period, stamp duty payable on the instruments to be specified therein, executed by or in favour of the eligible industrial enterprises, in connection with the Karnataka Agribusiness and Food Processing Policy 2015, specified in the Government Order No.AGD 94 AMS 2015, dated: 11.12.2015, published in the Karnataka Gazette, dated: 21st January, 2016 or any other modifications specified by the State Government from time to time subject to production of a certificate to that effect from the Prescribed Authority."

**STATEMENT OF OBJECTS AND REASONS**

It is consider necessary further to amend the Karnataka Stamp Act, 1957 (Karnataka Act No. 34 of 1957) to give effect to,-

(i) the proposals made in the Agribusiness and Food Processing Policy, 2015; and

(ii) give impetus to the growth in the Agribusiness and Food Processing Industrial Enterprises.

Hence the bill.

**FINANCIAL MEMORANDUM**

There is no extra expenditure involved in the proposed Legislative measure.

**KAGODU THIMMAPPA**
Minister for Revenue

**S. Murthy**
Secretary (I/c)
Karnataka Legislative Assembly

**ANNEXURE**

## Extract from the Karnataka Stamp Act, 1957

## (Karnataka Act No. 34 of 1957)

**XXX XXX XXX**

**9. Power to reduce, remit or compound duties.-** (1) The State Government may, by rule or order published in the Official Gazette,—

**XXX XXX XXX**

Provided also that the State Government may, in public interest, by notification, reduce or remit, for a period of five years with effect from 16th January 2014, the stamp duty payable on any instrument executed by or between the concerned persons, in connection with the new Investment Incentive Policy (i.e. policy: IT, ITes, Innovation Incentives Policy) for the IT/ITes/Start-ups/ Animation /Gaming / Computer Graphics /Telecom/ BPO/KPO/other knowledge based industries, specified by general or special order of the State Government from time to time subject to production of a certificate to that effect from the prescribed Authority.

**XXX XXX XXX**

Government Press, Vikasa Soudha Unit, Bengaluru 16th June, 2017 P7, W.D., Copies 1000